# ಕರ್ನಾಟಕ ವಿಧಾನ ಪರಿಷತ್ತು

**ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 605**

**ಸದಸ್ಯರ ಹೆಸರು : ಶ್ರೀ ಸಿ. ಎನ್. ಮಂಜೇಗೌಡ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)**

**ಉತ್ತರಿಸಬೇಕಾದ ಸಚಿವರು : ಗಣಿ ಮತ್ತು ಭೂ ವಿಜ್ಞಾನ ಹಾಗೂ ತೋಟಗಾರಿಕೆ ಸಚಿವರು**

**ಉತ್ತರಿಸಬೇಕಾದ ದಿನಾಂಕ : 11.03.2025**

| ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿ ಪುಷ್ಪೋದ್ಯಮ ಉತ್ತೇಜಿಸಲು ಕೈಗೊಂಡಿರುವ ಕ್ರಮಗಳೇನು: | ರಾಜ್ಯದಲ್ಲಿ ಪುಷ್ಪೋದ್ಯಮ ಉತ್ತೇಜಿಸಲು ತೋಟಗಾರಿಕೆ ಇಲಾಖೆ ವತಿಯಿಂದ ಈ ಕೆಳಕಂಡ ಯೋಜನೆಗಳಡಿ ರೈತರಿಗೆ ಸಹಾಯಧನ ಒದಗಿಸಿ ಉತ್ತೇಜನ ನೀಡಲಾಗುತ್ತಿದೆ:- |

1. ರಾಜ್ಯದಲ್ಲಿ ಪುಷ್ಪೋದ್ಯಮ ಉತ್ತೇಜಿಸಲು 2002 ನೇ ಸಾಲಿನಲ್ಲಿ ಅಂತರಾಷ್ಟ್ರೀಯ ಪುಷ್ಪ ಹರಾಜು ಮಾರುಕಟ್ಟೆಯನ್ನು (IFAB) ಬೆಂಗಳೂರಲ್ಲಿ ಸ್ಥಾಪಿಸಲಾಗಿರುತ್ತದೆ.

2. ರಾಷ್ಟ್ರೀಯ ತೋಟಗಾರಿಕೆ ಮಿಷನ್ ಯೋಜನೆಯಡಿ ರೈತರಿಗೆ ಪ್ರದೇಶ ವಿಸ್ತರಣೆಯಡಿ ಗರಿಷ್ಟ 2 ಹೆಕ್ಟೇರ್ ವರೆಗೂ ಈ ಕೆಳಕಂಡಂತೆ ಸಹಾಯಧನ ನೀಡಲಾಗುತ್ತಿದೆ:-

| ಬೆಳೆಗಳು | ಘಟಕ ವೆಚ್ಚ ರೂ. ಲಕ್ಷಗಳಲ್ಲಿ ಪ್ರತಿ ಹೆಕ್ಟೇರ್ | ಶೇ. ಸಹಾಯಧನ | | ಸಹಾಯ ಧನದ ಮೊತ್ತ ರೂ. ಲಕ್ಷಗಳಲ್ಲಿ |
|---|---|---|---|---|
| | | ಇತರೆ ರೈತರು | ಸಣ್ಣ ರೈತರು | |
| ಬಿಡಿ ಹೂಗಳು | 0.4 | 25% | 40% | 0.10 ರಿಂದ 0.16 |
| ಗೆಡ್ಡೆ ಜಾತಿಯ ಹೂಗಳು | 1.5 | 25% | 40% | 0.375ರಿಂದ 0.6 |
| ಕಟ್ ಫ್ಲವರ್ | 1.0 | 25% | 40% | 0.25ರಿಂದ 0.40 |

3. ಮಹಾತ್ಮ ಗಾಂಧಿ ನರೇಗಾ ಯೋಜನೆಯಡಿ ಗುಲಾಬಿ ಮತ್ತು ಮಲ್ಲಿಗೆ ಬೆಳೆಯ ಪ್ರದೇಶ ವಿಸ್ತರಣೆ ಕಾರ್ಯಕ್ರಮದಡಿ ಕ್ರಮವಾಗಿ 457.64 ಮತ್ತು 82.99 ಹೆ. ಪ್ರದೇಶಗಳಷ್ಟು ಅಭಿವೃದ್ಧಿಪಡಿಸಲಾಗಿದೆ.

4. 2023-24 ನೇ ಸಾಲಿನಲ್ಲಿ ಆಯವ್ಯಯ ಕಂಡಿಕೆ-49 ರಲ್ಲಿ "ವಾಣಿಜ್ಯ ಹೂವಿನ ರಫ್ತಿಗಾಗಿ ತಳಿಗಳ ಕೊರತೆ ನಿವಾರಿಸಲು ಆಮದಿಗಾಗಿ ಪ್ರೋತ್ಸಾಹ" ಕಾರ್ಯಕ್ರಮವನ್ನು ಸಮಗ್ರ ತೋಟಗಾರಿಕೆ ಅಭಿವೃದ್ಧಿ ಯೋಜನೆಯಡಿ ಉತ್ಕೃಷ್ಟ ಗುಣಮಟ್ಟದ ಜಾಗತಿಕ ತಳಿಗಳನ್ನು ಪರಿಚಯಿಸಿ (ಆಮದು) ಮತ್ತು ಅವುಗಳ ರಫ್ತನ್ನು ಉತೇಜಿಸಲು ಕನಿಷ್ಟ 10 ಗುಂಟೆ

| | | |
|---|---|---|
| | | ಪ್ರದೇಶದಲ್ಲಿ ರೈತರು ಖರೀದಿಸಿದ ಗಿಡಗಳ ವೆಚ್ಚದ ಶೇ.50 ರಂತೆ ಸಹಾಯಧನ ಗರಿಷ್ಟ ರೂ.4.00 ಲಕ್ಷಗಳಿಗೆ ಮೀರದಂತೆ 7 ಫಲಾನುಭವಿಗಳಿಗೆ ರೂ.22.30 ಲಕ್ಷಗಳಷ್ಟು ಸಹಾಯಧನ ನೀಡಿ ಅನುಷ್ಠಾನಗೊಳಿಸಲಾಗಿದೆ. |
| ಆ) | ಹೂವುಗಳ ರಫ್ತಿಗಾಗಿ ಹೊಸ ಮಾರುಕಟ್ಟೆ ನಿರ್ಮಿಸುವ ಉದ್ದೇಶ ಸರ್ಕಾರಕ್ಕೆ ಇದೆಯೇ: ಇದ್ದಲ್ಲಿ ಯಾವ ಭಾಗದಲ್ಲಿ ಈ ಮಾರುಕಟ್ಟೆಗಳನ್ನು ನಿರ್ಮಿಸುವ ಉದ್ದೇಶವಿದೆ: | ಹೌದು.<br>ಹೂವುಗಳ ರಫ್ತಿಗಾಗಿ ಕೃಷಿ ಮಾರುಕಟ್ಟೆ ಇಲಾಖೆ ವತಿಯಿಂದ ತೋಟಗಾರಿಕೆ ವಿಶ್ವವಿದ್ಯಾಲಯ ಬಾಗಲಕೋಟೆಯ ಅಧೀನದಲ್ಲಿ ಬೆಂಗಳೂರಿನ ಜಿ.ಕೆ.ವಿ.ಕೆ ಆವರಣದಲ್ಲಿರುವ 5 ಎಕರೆ ಪ್ರದೇಶದಲ್ಲಿ ಮತ್ತು ಚಿಕ್ಕಬಳ್ಳಾಪುರ ಜಿಲ್ಲೆ ನಂದಿ ಹೋಬಳಿ ಯಲುವಳ್ಳಿ ಗ್ರಾಮದ 20 ಎಕರೆ ಪ್ರದೇಶದಲ್ಲಿ ಸ್ಥಾಪಿಸಲು ಉದ್ದೇಶಿಸಲಾಗಿದೆ. |
| ಇ) | ರಾಜ್ಯದಲ್ಲಿ ಒಟ್ಟು ಪುಷ್ಪ ಬೆಳೆಯುವ ಪ್ರದೇಶವೆಷ್ಟು : ಕಳೆದ ಹತ್ತು ವರ್ಷಗಳ ಪುಷ್ಪೋದ್ಯಮ ಬೆಳವಣಿಗೆ ಬಗ್ಗೆ ಅಂಕಿ ಸಮೇತ ವರ್ಷವಾರು ಮಾಹಿತಿ ಒದಗಿಸುವುದು? | ರಾಜ್ಯದಲ್ಲಿ ಪ್ರಸ್ತುತ 42,829 ಹೆಕ್ಟೇರು ಪ್ರದೇಶದಲ್ಲಿ ಪುಷ್ಪ ಬೆಳೆಯನ್ನು ಬೆಳೆಯಲಾಗುತ್ತಿದೆ.<br><br>ಕಳೆದ ಹತ್ತು ವರ್ಷಗಳ ಪುಷ್ಪೋದ್ಯಮ ಬೆಳವಣಿಗೆಯ ಅಂಕಿ ಅಂಶಗಳ ವಿವರಗಳು ಈ ಕೆಳಕಂಡತಿದೆ:- |

| ವರ್ಷ | ಪ್ರದೇಶ (ಹೆಕ್ಟೇರ್ ಗಳಲ್ಲಿ) |
|---|---|
| 2013-14 | 30,058 |
| 2014-15 | 30,980 |
| 2015-16 | 32,092 |
| 2016-17 | 30,612 |
| 2017-18 | 31,234 |
| 2018-19 | 27,453 |
| 2019-20 | 34,209 |
| 2020-21 | 37,811 |
| 2021-22 | 46,519 |
| 2022-23 | 42,829 |

HORTI 67 HGM 2025

(ಎಸ್. ಎಸ್. ಮಲ್ಲಿಕಾರ್ಜುನ್)
ಗಣಿ ಮತ್ತು ಭೂ ವಿಜ್ಞಾನ ಹಾಗೂ ತೋಟಗಾರಿಕೆ ಸಚಿವರು